ಊ) ಇಲ್ಲ.

ಋ) ಉದ್ಭವಿಸುವುದಿಲ್ಲ.

338 (421) ಶ್ರೀಮತಿ ಶಕುಂತಲಾ ಟಿ.ಶೆಟ್ಟಿ (ಪುತ್ತೂರು):– ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಕಾನೂನು ವೃತ್ತಿ ನಿರ್ವಹಿಸುತ್ತಿರುವ ಮಹಿಳಾ ನ್ಯಾಯವಾದಿಗಳ ಸಂಖ್ಯೆ ಎಷ್ಟು (ಜಿಲ್ಲವಾರು ವಿವರ ನೀಡುವುದು):

ಆ) ಈ ಮಹಿಳಾ ವಕೀಲರುಗಳಿಗೆ ಸರ್ಕಾರ ನೀಡುತ್ತಿರುವ ವಿಶೇಷ ಸೌಲತ್ತುಗಳೇನು?

ಇ) ಮಹಿಳಾ ವಕೀಲಿ ವೃತ್ತಿ ನಡೆಸುವ ಯುವ ತರಬೇತುದಾರ ಮಹಿಳೆಯರಿಗೆ ಸ್ಟೈಫೆಂಡ್ ನೀಡುವ ಪ್ರಸ್ತಾಪ ಸರ್ಕಾರದ ಮುಂದಿದೆಯೇ?

ಈ) ಇದ್ದಲ್ಲಿ ಎಷ್ಟು ಸಂಭಾವನೆಯನ್ನು ನೀಡಲಾಗುವುದು:

ಉ) ಯಾವಾಗ ನೀಡಲು ಉದ್ದೇಶಿಸಲಾಗಿದೆ (ವಿವರಗಳನ್ನು ನೀಡಲಾಗುವುದು)

ಶ್ರೀ ಹೆಚ್.ಕೆ. ಪಾಟೀಲ್ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು):

ಅ) 8,792 ಜಿಲ್ಲಾವಾರು ವಿವರ ತಕ್ಷಣ ಲಭ್ಯವಿಲ್ಲ. ನಂತರ ಒದಗಿಸಲಾಗುವುದು.

ಆ) ಆರ್ಥಿಕ ಸಹಾಯ ನೀಡಲಾಗುತ್ತಿದೆ.

ಇ) ಈಗಾಗಲೇ ನೀಡಲಾಗುತ್ತಿದೆ.

ಈ) ತಲಾ ಮಾಹೆಯಾನ ರೂ.1,000ಗಳ ಸಂಭಾವನೆಯನ್ನು 4ವರ್ಷಗಳು ನೀಡಲಾಗುತ್ತಿದೆ.

ಉ) ಉದ್ಭವಿಸುವುದಿಲ್ಲ.

340 (642) ಶ್ರೀಮತಿ ಶಕುಂತಲಾ ಟಿ.ಶೆಟ್ಟಿ(ಪುತ್ತೂರು):– ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ದಕ್ಷಿಣ ಕನ್ನಡ ಹಾಗೂ ಉಡುಪಿ ಜಿಲ್ಲೆಗಳಲ್ಲಿ 2003–2004ರಲ್ಲಿ ಕೊಲೆಯಾದ ಬಂಟ್ವಾಳದ ಭಾರತಿ, ಹೆಬ್ರಿಯ ಸುಚಿತಶೆಟ್ಟಿ, ಪುತ್ತೂರಿನ ಶಮೀಮಾ, ಉಡುಪಿಯ ಡಾ: ಚಂದ್ರಕಲಾಭಕ್ತ, ಕಾರ್ಕಳದ ಜಯ ಪ್ರಕರಣದ ಅಪರಾಧಿಗಳನ್ನು ಗುರುತಿಸಲಾಗಿದೆಯೇ;

ಆ) ಈ ಬಗ್ಗೆ ಸಿ.ಓ.ಡಿ. ತನಿಖೆಗೊಳಪಟ್ಟ ಪ್ರಕರಣಗಳು ಯಾವುವು;

ಇ) ತನಿಖೆ ಯಾವ ಹಂತದಲ್ಲಿದೆ ವಿವರಗಳನ್ನು ನೀಡುವುದು?

ಶ್ರೀ ಎನ್. ಧರ್ಮಸಿಂಗ್ (ಮುಖ್ಯ ಮಂತ್ರಿಗಳು):

ಅ) 1) ಬಂಟ್ವಾಳದ ಭಾರತಿ ಪ್ರಕರಣ–ಮೃತಳು ನೇತ್ರಾವತಿ ನದಿಯಲ್ಲಿ ಬಿದ್ದು ಆತ್ಮಹತ್ಯೆ ಮಾಡಿಕೊಂಡಿರುತ್ತಾರೆ.

2) ಹೆಬ್ರಿಯ ಸುಚಿತಶೆಟ್ಟಿ ಪ್ರಕರಣ–ಈ ಪ್ರಕರಣದಲ್ಲಿ ಇಬ್ಬರು ಸಂಶಯಯುತ ಆರೋಪಿಗಳನ್ನು, ಪಿ–300 ಪರೀಕ್ಷೆಗೆ ಒಳಪಡಿಸಲಾಗಿದೆ.

3) ಪುತ್ತೂರಿನ ಶಮೀಮಾ ಪ್ರಕರಣ–ಆರೋಪಿ ಶಮೀರ್ ಎಂಬುವರನ್ನು ಗುರತಿಸಲಾಗಿದೆ.

4) ಉಡುಪಿಯ ಡಾ: ಚಂದ್ರಕಲಾಭಕ್ತ ಪ್ರಕರಣ–ಈ ಪ್ರಕರಣದಲ್ಲಿ ಮೃತಳ ತಮ್ಮನಾದ ಚಂದ್ರಕಾಂತ್ ಭಕ್ತ ಹಾಗೂ ಈ ಪ್ರಕರಣದ ಪಿರ್ಯಾದಿ ಹಾಗೂ ಮೃತಳ ಸಂಬಂಧಿ ಕಿರಣ್ ವಿನೋದ್ ಪೈ ಹಾಗೂ ಸೋನಾನ ಪೈನಾನ್ಸ್‌ನ ಸುಂದರ್ ರವರ ಚಲನವಲನಗಳ ಬಗ್ಗೆ ಸಂಶಯವಿದ್ದು ಈ ಬಗ್ಗೆ ಮಾಹಿತಿ ಸಂಗ್ರಹಿಸುವುದು ಬಾಕಿ ಇದ್ದು ತನಿಖೆ ಪ್ರಗತಿಯಲ್ಲಿರುತ್ತದೆ.

5) ಕಾರ್ಕಳದ ಜಯ ಪ್ರಕರಣ–ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಬ್ರಹ್ಮಾವರ ಠಾಣೆ ಯು.ಡಿ.ಆರ್.ನಲ್ಲಿ ಅಂತಿಮ ವರದಿ ಸಲ್ಲಿಸಿದ್ದು, ಎಮ್.ಎ.ಜಿ.ಎಸ್.ಆರ್. (2)/330/04–05ರಂತೆ ಕುಂದಾಪುರ ಉಪವಿಭಾಗದ ದಂಡಾಧಿಕಾರಿಯವರ ನ್ಯಾಯಾಲಯದಲ್ಲಿ ಸ್ವೀಕೃತಿ ಆದೇಶ ಆಗಿರುತ್ತದೆ.

ಆ) ಬಂಟ್ವಾಳದ ಭಾರತಿ, ಹೆಬ್ರಿಯ ಸುಚಿತಶೆಟ್ಟಿ, ಪುತ್ತೂರಿನ ಶಮೀಮಾ ಹಾಗೂ ಉಡುಪಿಯ ಡಾ: ಚಂದ್ರಕಲಾಭಕ್ತ ಪ್ರಕರಣಗಳು.

ಇ) 1) ಬಂಟ್ವಾಳದ ಭಾರತಿ ಪ್ರಕರಣ–ದಿನಾಂಕ 30–8–2004 ರಂದು ಎಸ್‌ಡಿಎಂ ನ್ಯಾಯಾಲಯಕ್ಕೆ "ಬಿ" ಅಂತಿಮ ವರದಿಯನ್ನು ಸಲ್ಲಿಸಲಾಗಿದೆ.

2) ಹೆಬ್ರಿಯ ಸುಚಿತಶೆಟ್ಟಿ ಪ್ರಕರಣ–ಈ ಪ್ರಕರಣದಲ್ಲಿ ಇಬ್ಬರು ಸಂಶಯಯುತ ಆರೋಪಿಗಳನ್ನು ಪಿ–300 ಪರೀಕ್ಷೆಗೆ ಒಳಪಡಿಸಲಾಗಿರುತ್ತದೆ ಹಾಗೂ ತನಿಖೆ ಪ್ರಗತಿಯಲ್ಲಿರುತ್ತದೆ.

3) ಪುತ್ತೂರಿನ ಶಮೀಮಾ ಪ್ರಕರಣ–ಸಿ.ಓ.ಡಿ. ತನಿಖಾಧಿಕಾರಿಗಳು ಸಂಶಯಯುತ ಆರೋಪಿ ಶಮೀರ್ ಎಂಬುವನ ಬೆರಳು ಮುದ್ರೆ ಪ್ರಮಾಣ ಪತ್ರವನ್ನು ಬೆರಳುಮುದ್ರೆ ತಜ್ಞರಿಂದ ಪಡೆಯಲಾಗಿದೆ. ಸದರಿ ವರದಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಲು ತನಿಖಾಧಿಕಾರಿಗಳು ಅನುಮತಿ ಕೋರಿದ್ದು ವರದಿ ಪರಿಶೀಲನೆಯಲ್ಲಿದೆ.

4) ಉಡುಪಿಯ ಡಾ: ಚಂದ್ರಕಲಾಭಕ್ತ ಪ್ರಕರಣ–ಈ ಪ್ರಕರಣದಲ್ಲಿ ಸಿಓಡಿ ತನಿಖಾಧಿಕಾರಿಗಳು 20 ಜನರನ್ನು ವಿಚಾರಣೆ ಮಾಡಿ ಹೇಳಿಕೆಗಳನ್ನು ಪಡೆದಿದ್ದು ಮೃತಳ ತಮ್ಮನಾದ ಚಂದ್ರಕಾಂತ್ ಭಕ್ತ ಹಾಗೂ ಈ ಪ್ರಕರಣದ ಪಿರ್ಯಾದಿ ಹಾಗೂ ಮೃತಳ ಸಂಬಂಧಿ ಕಿರಣ್ ವಿನೋದ್ ಪೈ ಹಾಗೂ ಸೋನಾನ ಪೈನಾನ್ಸ್‌ನ ಸುಂದರ್ ರವರ ಚಲನವಲನಗಳ ಬಗ್ಗೆ ಸಂಶಯವಿದ್ದು ಈ ಬಗ್ಗೆ ಮಾಹಿತಿ ಸಂಗ್ರಹಿಸುವುದು ಬಾಕಿ ಇದ್ದು ತನಿಖೆ ಪ್ರಗತಿಯಲ್ಲಿರುತ್ತದೆ.

342 (391) ಶ್ರೀ ಶಂಕರಲಿಂಗೇಗೌಡ.ಹೆಚ್.ಎಸ್ (ಚಾಮರಾಜ):– ಮಾನ್ಯ ಮುಖ್ಯ ಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮೈಸೂರು ನಗರಕ್ಕೆ ಯಾವ ಯಾವ ಸ್ಥಳಗಳಿಂದ ಎಷ್ಟೆಷ್ಟು ಎಂ.ಜಿ.ಡಿ. ಕುಡಿಯುವ ನೀರು ಬಿಡಲಾಗುತ್ತಿದೆ;